FEBRUARY 07, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಕೋಟಿ ಕೋಟಿ ಜನರ ಆಶಾಕಿರಣವಾಗಿದ್ದ, ಬಾಬಾಸಾಹೇಬರ ಬೆನ್ನೆಲುಬಾಗಿ ನಿಂತು, ಅಪ್ರತಿಮ ತ್ಯಾಗ ಮಾಡಿದ, ಮಾತೆ ರಮಾಬಾಯಿ ಅಂಬೇಡ್ಕರ್ ಅವರ ಜನ್ಮದಿನವಾದ ಇಂದು, ಅವರಿಗೆ ಗೌರವದ ನಮನಗಳನ್ನು ಸಲ್ಲಿಸುತ್ತಿರುವುದಾಗಿ, ಲೋಕೋಪಯೋಗಿ ಖಾತೆ ಸಚಿವ ಸತೀಶ ಜಾರಕಿಹೊಳಿ, ತಿಳಿಸಿದ್ದಾರೆ.

<><><>

ರಾಷ್ಟ್ರಕವಿ, ಅಧ್ಯಾಪಕ, ಜಿ.ಎಸ್. ಶಿವರುದ್ರಪ್ಪ ಅವರ, ಜನ್ಮದಿನವಿಂದು. ಕನ್ನಡ ಸಾಹಿತ್ಯ ಲೋಕದ ಅನನ್ಯ ಸಾಹಿತಿ, ಕಾವ್ಯ, ವಿಮರ್ಶೆ, ಸಂಶೋಧನೆ ಮೂಲಕ, ಸಾರಸ್ವತ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ, ಜಿ.ಎಸ್.ಎಸ್. ಅವರ ಸ್ಮೃತಿಗೆ, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ, ಗೌರವ ಅರ್ಪಿಸಿದ್ದಾರೆ.

<><><>

ರೇಲ್ವೆ ಖಾತೆ ಹಾಗೂ ಕೇಂದ್ರ ಜಲ ಸಂಪನ್ಮೂಲ ಸಚಿವಾಲಯದ, ರಾಜ್ಯ ಖಾತೆ ಸಚಿವ, ವಿ. ಸೋಮಣ್ಣ, ಇಂದು ಬೆಳಗಾವಿಗೆ ಭೇಟಿ ನೀಡಿದ್ದಾರೆ. ಪದ್ಮಶ್ರೀ ಪ್ರಶಸ್ತಿಗೆ ಆಯ್ಕೆಯಾದ, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದ ಸಾಧಕ, ಪ್ರಭಾಕರ ಕೋರೆ ಅವರ ಮನೆಗೆ ಅವರು ಭೇಟಿ ನೀಡಿದರು. ಇಂದು ಮಧ್ಯಾಹ್ನ 1 ಗಂಟೆಗೆ, ಸಚಿವ ವಿ.ಸೋಮಣ್ಣ ಅವರು, ಕಣಬರ್ಗಿ ಸಮೀಪದ ನಾಗರತ್ನ ರಾಮಗೌಡರ ಅವರ, ಎಚ್.ಐ.ವಿ ಸೋಂಕಿತರ ಆರೈಕೆಯ, ಆಶ್ರಯ ಫೌಂಡೇಶನ್‌ಗೆ, ಭೇಟಿ ನೀಡಲಿದ್ದಾರೆ.

<><><>

ರಾಜ್ಯದಲ್ಲಿ, ಸೈಬರ್ ಅಪರಾಧಗಳ ತಡೆಗೆ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಡುವವರ ವಿರುದ್ಧ ಕ್ರಮಕ್ಕೆ, ವಿಶೇಷ ಕಾನೂನು ಜಾರಿಗೊಳಿಸಲು, ರಾಜ್ಯ ಸರ್ಕಾರ ತೀರ್ಮಾನಿಸಿದೆ ಎಂದು, ಗೃಹ ಖಾತೆ ಸಚಿವ ಜಿ.ಪರಮೇಶ್ವರ ಚಿಕ್ಕಮಗಳೂರಿನಲ್ಲಿ ತಿಳಿಸಿದ್ದಾರೆ.

<><><>

ಜಿ. ಪರಮೇಶ್ವರ ಧ್ವನಿ 20 ಸೆಕೆಂದುಗಳು

<><><>

ಹಾಸನ ಜಿಲ್ಲೆ, ಬೇಲೂರು ಪೊಲೀಸ್ ಠಾಣೆಗೆ, ಭೇಟಿ ನೀಡಿದ, ಗೃಹ ಖಾತೆ ಸಚಿವ ಜಿ.ಪರಮೇಶ್ವರ, ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ, ಕಳೆದ ಒಂದು ವ ´ದಲ್ಲಿ, ದಾಖಲಾದ ಅಪರಾಧ ಪ್ರಕರಣಗಳು, ಜಿಲ್ಲೆಯ ಕಾಫಿ ತೋಟಗಳಿಗೆ, ಹೊರ ರಾಜ್ಯ ಹಾಗೂ ವಿದೇಶದಿಂದ ಬಂದ, ವಲಸೆ ಕಾರ್ಮಿಕರ ಬಗ್ಗೆ ಮಾಹಿತಿ ಪಡೆದರು.

<><><>

ರಾಜ್ಯ ಮಕ್ಕಳ ಹಕ್ಕುಗಳ, ರಕ್ಷಣಾ ಆಯೋಗದ ನಿರ್ದೇಶನದಂತೆ, 'ತೆರೆದ ಮನೆ' ಯೋಜನೆ ಅಡಿ, ಕಲಬುರಗಿ ನಗರದ, ಸ್ಟೇಷನ್ ಬಜಾರ್ ಪೊಲೀಸ್ ಠಾಣೆಗೆ, ಶಾಲಾ ವಿದ್ಯಾರ್ಥಿಗಳು, ಭೇಟಿ ನೀಡಿ, ಕಾನೂನು, ಸಂಚಾರ ನಿಯಮ, ಸಹಾಯವಾಣಿಗಳ ಬಗ್ಗೆ, ಮಾಹಿತಿ ಪಡೆದರು.

<><><>

ಕೇಂದ್ರ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಖಾತೆ ಸಚಿವ, ಗಜೇಂದ್ರಸಿಂಗ್ ಶೇಖಾವತ್ ಅವರನ್ನು, ಹೊಸ ದಿಲ್ಲಿಯಲ್ಲಿ ಭೇಟಿ ಮಾಡಿದ, ಬೀದರ ಸಂಸದ ಸಾಗರ ಖಂಡ್ರೆ, ಬೀದರ ಲೋಕಸಭಾ ಕ್ಷೇತ್ರದ ಪ್ರವಾಸೋದ್ಯಮ ಅಭಿವೃದ್ಧಿಗಾಗಿ, ಕೇಂದ್ರದಿಂದ ಹೆಚ್ಚುವರಿ ಅನುದಾನಕ್ಕಾಗಿ, ಮನವಿ ಸಲ್ಲಿಸಿದರು.

<><><>

ನಾಗರಹೊಳೆ, ಹುಲಿ ಸಂರಕ್ಷಿತ ಅಭಯಾರಣ್ಯ ವ್ಯಾಪ್ತಿಯಲ್ಲಿ, ಮಾನವ, ವನ್ಯಜೀವಿ ಸಂಘರ್ಷ ತಡೆಗಟ್ಟಲು, 11 ಕೋಟಿ 65 ಲಕ್ಷ ರೂಪಾಯಿ ವೆಚ್ಚದಲ್ಲಿ, ರೇಲ್ವೆ ಹಳಿ ತಡೆಗೋಡೆ ನಿರ್ಮಿಸಲು, ಸಚಿವ ಸಂಪುಟ ಸಭೆ, ಅನುಮೋದಿಸಿದೆ.

<><><>

ಧಾರವಾಡ ಜಿಲ್ಲೆಯ, ಕುಂದಗೋಳ, ನವಲಗುಂದ ಹಾಗೂ ಹುಬ್ಬಳ್ಳಿಯ ಗ್ರಾಮೀಣ ಭಾಗದಲ್ಲಿ, ಮಳೆಗಾಲದಲ್ಲಿ ಉಂಟಾಗುವ, ಬೆಣ್ಣೆ ಹಳ್ಳದ ಪ್ರವಾಹದ ಸಮಸ್ಯೆಗೆ, ಮೊದಲ ಹಂತದಲ್ಲಿ, 200 ಕೋಟಿ ರೂಪಾಯಿ ವೆಚ್ಚದಲ್ಲಿ, ಕಾಮಗಾರಿ ಕೈಗೊಳ್ಳಲಾಗುತ್ತಿದೆ ಎಂದು, ನವಲಗುಂದ ವಿಧಾನಸಭಾ ಕ್ಷೇತ್ರದ ಶಾಸಕ, ಎನ್.ಎಚ್. ಕೋನರಡ್ಡಿ ತಿಳಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ನಾಳೆ ಮಧ್ಯಾಹ್ನ 3 ಗಂಟೆಗೆ, ಹುಬ್ಬಳ್ಳಿ ತಾಲೂಕು, ಶಿರಗುಪ್ಪಿ ಗ್ರಾಮದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಣ್ಣೆ ಹಳ್ಳದ ಪ್ರವಾಹ ನಿಯಂತ್ರಣ ಕಾಮಗಾರಿಗೆ, ಚಾಲನೆ ನೀಡಲಿದ್ದಾರೆ, ಎಂದರು.

<><><>

ಉನ್ನತ ಶಿಕ್ಷಣ ಮತ್ತು ಉದ್ಯೋಗಾರ್ಹತೆ ನಡುವಿನ ಕಂದರ ಬೆಸೆಯಲು, ಭಾರತದ ವಿಶ್ವವಿದ್ಯಾಲಯಗಳ ಒಕ್ಕೂಟ, ಹುಬ್ಬಳ್ಳಿಯ ದೇಶಪಾಂಡೆ ಫೌಂಡೇಷನ್‌ದೊಂದಿಗೆ, ಹಲವು ನಿರ್ಣಾಯಕ ಕ್ರಮಗಳನ್ನು ಕೈಗೊಂಡಿದೆ ಎಂದು, ಭಾರತ ವಿಶ್ವವಿದ್ಯಾಲಯಗಳ ಒಕ್ಕೂಟದ, ಪ್ರಧಾನ ಕಾರ್ಯದರ್ಶಿ ಪಂಕಜ ಮಿತ್ತಲ್ ತಿಳಿಸಿದ್ದಾರೆ. ಹುಬ್ಬಳ್ಳಿಯ, ಬಿ.ವಿ.ಬಿ.ಯ, ಕೆ.ಎಲ್.ಇ. ಟೆಕ್, ಅಭಿಯಾಂತ್ರಿಕ ವಿಶ್ವವಿದ್ಯಾಲಯ ಆವರಣದ, ದೇಶಪಾಂಡೆ ಪ್ರತಿಷ್ಠಾನದ ಸಭಾಂಗಣದಲ್ಲಿ, ದೇಶಪಾಂಡೆ ಫೌಂಡೇಷನ್ ಆಯೋಜಿಸಿರುವ, ಅಭಿವೃದ್ಧಿ ಸಂವಾದ –2026, ಸಂವಾದ ಗೋಷ್ಠಿಯಲ್ಲಿ, ಮಾತನಾಡಿದರು.

<><><>

ಖ್ಯಾತ ವಿದ್ವಾಂಸ, ಬನ್ನಂಜೆ ಗೋವಿಂದಾಚಾರ್ಯರ, 90ನೇ ಜಯಂತ್ಯುತ್ಸವದ ಅಂಗವಾಗಿ, ಶ್ರೀ ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ, ಧಾರವಾಡದ ಆಲೂರು ವೆಂಕಟರಾಯ ಸಾಂಸ್ಕೃತಿಕ ಭವನದಲ್ಲಿ, ಇಂದು ಸಂಜೆ 4.30ಕ್ಕೆ, 'ಬನ್ನಂಜೆ 90: ವಿಶ್ವ ನಮನ' ಕಾರ್ಯಕ್ರಮ ಆಯೋಜಿಸಿದೆ. ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಉಪ ಕುಲಪತಿ, ಮಲ್ಲೇಪುರಂ ಜಿ. ವೆಂಕಟೇಶ, ಹರ್ಷ ಡಂಬಳ, ವೀಣಾ ಬನ್ನಂಜೆ ಹಾಗೂ ಹ.ವೆಂ. ಕಾಖಂಡಕಿ ಸೇರಿದಂತೆ, ಅನೇಕರು ಪಾಲ್ಗೊಂಡು, ನುಡಿನಮನ ಸಲ್ಲಿಸಲಿದ್ದಾರೆ.

<><><>

ನಿಧನ ವಾರ್ತೆ

<><><>

ಆಕಾಶವಾಣಿ ರಾಯಚೂರು ಕೇಂದ್ರದ, ನಿವೃತ್ತ ನಿಲಯ ನಿರ್ದೇಶಕಿ, ವಿಜಯಾ ಲಿಂಗಸೂರ, ನಿನ್ನೆ ರಾತ್ರಿ ಧಾರವಾಡದಲ್ಲಿ ನಿಧನರಾದರು. ಅವರಿಗೆ 86 ವರ್ಷ ವಯಸ್ಸಾಗಿತ್ತು. ಖ್ಯಾತ ಗಾಯಕರಾಗಿದ್ದ, ದಿವಂಗತ ಗುರುರಾವ ದೇಶಪಾಂಡೆ ಅವರ ಸುಪುತ್ರಿ.

ಪಣಜಿ, ಕಾರವಾರ, ಧಾರವಾಡ ಹಾಗೂ ರಾಯಚೂರು ಆಕಾಶವಾಣಿ ಕೇಂದ್ರಗಳಲ್ಲಿ, ಕಾರ್ಯಕ್ರಮ ನಿರ್ವಾಹಕರಾಗಿ, ಅವರು ಸೇವೆ, ಸಲ್ಲಿಸಿದ್ದರು. ಇಂದು ಬೆಳಗ್ಗೆ, ಧಾರವಾಡದಲ್ಲಿ, ಪಾರ್ಥಿವ ಶರೀರದ ಅಂತ್ಯಕ್ರಿಯೆ ಜರುಗಿತು. ಆಕಾಶವಾಣಿಯ ಸಿಬ್ಬಂದಿ ವರ್ಗ, ಕಂಬನಿ ಮಿಡಿದಿದೆ.

<><><>

ರಾಜ್ಯದಲ್ಲಿ ಆರೋಗ್ಯ ಹಕ್ಕು ಕಾಯ್ದೆ ಜಾರಿಗೊಳಿಸಬೇಕು; ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಮತ್ತು ಗುಣಮಟ್ಟದ ಔಷಧ ನೀಡಬೇಕು ಎಂದು ಆಗ್ರಹಿಸಿ, ಡ್ರಗ್ ಆಕ್ಷನ್ ಫೋರಮ್ ಕರ್ನಾಟಕ ಸೇರಿದಂತೆ, ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಧಾರವಾಡದಲ್ಲಿ ಜಾಥಾ ನಡೆಸಿದರು. ಡ್ರಗ್ ಆಕ್ಷನ್ ಫೋರಮ್, ಕರ್ನಾಟಕದ ಅಧ್ಯಕ್ಷ, ಡಾಕ್ಟರ್ ಗೋಪಾಲ ದಾಬಡೆ ನೇತೃತ್ವದಲ್ಲಿ, ಧಾರವಾಡದ ಗಾಂಧಿ ಶಾಂತಿ ಪ್ರತಿಷ್ಠಾನದಿಂದ, ಜಿಲ್ಲಾಧಿಕಾರಿ ಕಚೇರಿ ವರೆಗೆ, ಜಾಥಾ ನಡೆಯಿತು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.